| 2021–22ನೇ ಸಾಲಿನ ಪ.ಜಾ./ಪ.ವ. ವಿದ್ಯಾರ್ಥಿಗಳ ವಿ.ವಿ. ಇ.ಬಿ.ಎಲ್. ವಿವರ | | | | |
|---|---|---|---|---|
| **Sl. No.** | **Hostel's Name** | **Total of Students** | | **Total Amount** |
| 1 | Post-Graduate Student's Hostel For Men, B-1, MGM | SC | 272 | 816000 |
| | | ST | 100 | 300000 |
| 2 | Post-Graduate Student's Hostel For Men, B-2, MGM | SC | 246 | 738000 |
| | | ST | 56 | 168000 |
| 3 | Post-Graduate Student's Hostel For Men, B-3, MGM | SC | 154 | 462000 |
| | | ST | 29 | 87000 |
| 4 | Post-Graduate Student's Hostel For Women, B-1, MGM | SC | 143 | 429000 |
| | | ST | 31 | 93000 |
| 5 | Post-Graduate Student's Hostel For Women, B-2, MGM | SC | 170 | 510000 |
| | | ST | 35 | 105000 |
| 6 | Post-Graduate Student's Hostel For Women, B-3, MGM | SC | 98 | 294000 |
| | | ST | 24 | 72000 |
| 7 | Physical Education Men Hostel, Mysuru | SC | 13 | 39000 |
| | | ST | 6 | 18000 |
| 8 | Physical Education Women Hostel, Mysuru | SC | 2 | 6000 |
| | | ST | 0 | 0 |
| **Total of Students Numbers & Amount** | | | **1379** | **4137000** |

(I/c)
DIRECTOR OF STUDENT WELFARE
UNIVERSITY OF MYSORE, MYSURU

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005

website : www.uni-mysore.ac.in

**ವಿಷಯ:** ವಿ.ವಿ. ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾ./ಪ.ವ. ವಿದ್ಯಾರ್ಥಿಗಳ ಭೋಜನ ಶುಲ್ಕ ಮತ್ತು ವಿ.ವಿ.ಇ.ಬಿ.ಎಲ್. ಹುಂಡಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ದಿನಾಂಕ : 25.10.2021ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2021-22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೆ ಸಭೆಯ ನಡವಳಿ.
2. ವಿ.ವಿ. ಆದೇಶ ಸಂಖ್ಯೆ: ವಿ.ಕ್ಷೇ.ಪಾ.9/05/769/2021-22 ದಿನಾಂಕ: 18.11.2021

**ಪ್ರಸ್ತಾವನೆ:** ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ವಾಸವಿರುವ ಪ.ಜಾ./ಪ.ವ. ವಿದ್ಯಾರ್ಥಿಗಳ ಭೋಜನ ವೆಚ್ಚವನ್ನು ಹಿಂದಿನಿಂದಲೂ ಪ.ಜಾ./ಪ.ವ. ವಿಶೇಷ ಘಟಕದಿಂದ ನಿರ್ವಹಿಸಿ, ಅದಕ್ಕೆ ನಿಗದಿಪಡಿಸಿರುವ ಹೆಚ್.ಎಂ.ಎಂ. ಖಾತೆಯಿಂದ ಪಾವತಿಸಲಾಗುತ್ತಿತ್ತು. ಆದರೆ, ಇನ್ನು ಮುಂದೆ ವಿ.ವಿ. ವಿದ್ಯಾರ್ಥಿನಿಲಯಗಳಲ್ಲಿ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುವ ಭೋಜನ ವ್ಯವಸ್ಥೆಗೆ ಖರ್ಚಾಗುವ ದಿನಸಿ, ತರಕಾರಿ, ಹಾಲು/ಮೊಸರು ಇತ್ಯಾದಿ ವೆಚ್ಚಗಳನ್ನು ಸಂಬಂಧಿಸಿದ ಟೆಂಡರ್‌ದಾರರಿಗೆ ಕೇಂದ್ರೀಕೃತವಾಗಿ ಹಣಕಾಸು ವಿಭಾಗದಿಂದಲ್ಲೇ ಪಾವತಿಸಲು ಉಲ್ಲೇಖ (1)ರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಇದರಿಂದಾಗಿ ಉಲ್ಲೇಖ (2)ರ ವಿ.ವಿ. ಆದೇಶದಲ್ಲಿ ಹೆಚ್.ಎಂ.ಎಂ. ಖಾತೆಯನ್ನು ಹಣಕಾಸು ವಿಭಾಗಕ್ಕೆ ವರ್ಗಾವಣೆ ಮಾಡಿರುತ್ತಾರೆ.

ಅದರಂತೆ, ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುವ ಭೋಜನದ ವ್ಯವಸ್ಥೆಗೆ ಪ.ಜಾ./ಪ.ವ. (ವಿದ್ಯಾರ್ಥಿ ವೇತನಕ್ಕೆ ಅರ್ಹರಾದ) ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ಮಂಜೂರಾಗುವ ವಿದ್ಯಾರ್ಥಿವೇತನ ಹಾಗೂ ಕರ್ನಾಟಕ ಸರ್ಕಾರದಿಂದ ಮಂಜೂರಾಗುವ ಅಧಿಕ ಭೋಜನ ವೆಚ್ಚ ಎರಡು ಸೇರಿ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ರೂ. 1,600/- ಗಳಂತೆ ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ನೀಡುವ ವಿ.ವಿ. ಇ.ಬಿ.ಎಲ್. ರೂ. 300/-ಗಳಂತೆ ಒಟ್ಟು ರೂ. 1,900/-ಗಳಲ್ಲಿ ಕಲ್ಪಿಸಲಾಗುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದ ಮೊತ್ತಗಳಿಗೆ ಆಯಾಯ ನಿಲಯಗಳ ಶಿಕ್ಷಕ ಸಲಹೆಗಾರರುಗಳು ನಿಲಯದ ಪ.ಜಾ./ಪ.ವ. ವಿದ್ಯಾರ್ಥಿಗಳಿಂದ ಪ್ರತಿ ಮಾಹೆಯಾನ ಹಾಜರಾತಿ ಸಹಿಯನ್ನು ಪಡೆದು, ಡಿ.ಸಿ. ಹುಂಡಿಯನ್ನು ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಮೇಲುಸಹಿಯೊಂದಿಗೆ ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಲ್ಲಿಸುವುದು ಹಾಗೂ ಸರ್ಕಾರದಿಂದ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚ ಮಂಜೂರಾದ ನಂತರ ಸದರಿ ಮೊಬಲಗುಗಳನ್ನು ಹಣಕಾಸು ವಿಭಾಗವು ನಿರ್ವಹಿಸುವ ಹಾಸ್ಟೆಲ್ ಮೆಸ್ ಮ್ಯಾನೇಜ್‌ಮೆಂಟ್ ಖಾತೆಗೆ ಜಮಾ ಮಾಡಲು ಮಾನ್ಯ ಕುಲಪತಿಗಳು ಕಡತದಲ್ಲಿ ಒಪ್ಪಿರುವುದರಿಂದ ಈ ಆದೇಶ.

*****

**ವಿ.ವಿ. ಆದೇಶ ಸಂಖ್ಯೆ: ವಿ.ಕ್ಷೇ.ಪಾ.8/06/ 842 /2021-22 ದಿನಾಂಕ: 03-12-2021**

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, ದಿನಾಂಕ: 25.10.2021ರಂದು ನಡೆದ ಆಡಳಿತ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಮೈಸೂರು ನಗರ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಪ.ಜಾ./ಪ.ವ. ವಿದ್ಯಾರ್ಥಿಗಳ ಆಯಾಯ ತಿಂಗಳ ಭೋಜನ ವೆಚ್ಚದ ವಿವರಗಳನ್ನು ವಿದ್ಯಾರ್ಥಿಗಳ ಹಾಜರಾತಿಯ ಸಹಿಯೊಂದಿಗೆ ಒಬ್ಬ

**2

ವಿದ್ಯಾರ್ಥಿಗೆ ಮಾಹೆಯಾನ ರೂ. 1,900/- ಗಳಂತೆ, ಡಿ.ಸಿ. ಹುಂಡಿಯನ್ನು ಸಿದ್ಧಪಡಿಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಮೇಲುಸಹಿಯೊಂದಿಗೆ ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಲ್ಲಿಸಲು ಹಾಗೂ ಸರ್ಕಾರದಿಂದ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚ ಮಂಜೂರಾದ ನಂತರ ಸದರಿ ಮೊಬಲಗುಗಳನ್ನು ಹಣಕಾಸು ವಿಭಾಗದಿಂದ ನಿರ್ವಹಿಸುವ ಹಾಸ್ಟೆಲ್ ಮೆಸ್ ಮ್ಯಾನೇಜ್‌ಮೆಂಟ್‌ಗೆ ಜಮಾ ಮಾಡಲು ಶಿಕ್ಷಕ ಸಲಹೆಗಾರರಿಗೆ ಅನುಮತಿಯನ್ನು ನೀಡಲಾಗಿದೆ.

ಆದೇಶದ ಮೇರೆಗೆ,

21/12/2021

ಕುಲಸಚಿವ

18/11/21

19/11/2021

ಇವರಿಗೆ:

1. ಶಿಕ್ಷಕ ಸಲಹೆಗಾರರು, ಮೈಸೂರು ನಗರ ವ್ಯಾಪ್ತಿಗೊಳಪಡುವ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳು, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
4. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
5. ಉಪಕುಲಸಚಿವರು, ಪ.ಜಾ./ಪ.ವ. ವಿಶೇಷ ಘಟಕ, ಮೈಸೂರು
6. ಮಾನ್ಯ ಕುಲಪತಿಗಳ/ ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಕಚೇರಿ ಪ್ರತಿ